ದೂರವಾಣಿ : 080 - 22263479

ಬೆಂ.ಮ.ಪ್ರ.ಪ್ರಾ.

# ಗ್ರೇಟರ್ ಬೆಂಗಳೂರು - ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 560 052.

ಸಂಖ್ಯೆ : **BMRDA/LAO/143/2005-06** ದಿನಾಂಕ: 01.08.2019

**ನಮೂನೆ–II**

**"ನಿವೇಶನ ಬಿಡುಗಡೆ ಪ್ರಮಾಣ ಪತ್ರ"**

**(ಶೇ.40 ರಷ್ಟು)**

**ವಿಷಯ :** ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕಲ್ಲುಗೋಪನಹಳ್ಳಿ ಗ್ರಾಮದ ಸ.ನಂ. 4, 5, 20/1ಎ, 20/1ಬಿ, 20/1ಸಿ, 20/2ಎ, 20/2ಬಿ, 20/2ಸಿ, 20/3, 20/4, 20/5ಎ, 20/5ಬಿ, 20/6 ಮತ್ತು 20/7 ರಲ್ಲಿ ಒಟ್ಟು 76ಎಕರೆ 10ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಅನುಮೋದಿತ ವಸತಿ ವಿನ್ಯಾಸದಲ್ಲಿ ಉಳಿಕೆ ಅಂತಿಮ ಹಂತದ ಶೇ.40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**

1. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವಸತಿ ವಿನ್ಯಾಸ ಅನುಮೋದನಾ ಪತ್ರ ಸಂಖ್ಯೆ: ಬಿಎಂಆರ್‌ಡಿಎ/ಎಲ್ಎಓ/143/2005–06, ದಿನಾಂಕ: 29.10.2005.
2. ಮೊದಲನೇ ಹಂತದ ಶೇ.60ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಿದ ಪ್ರಮಾಣ ಪತ್ರ ಸಂಖ್ಯೆ: ಬಿಎಂಆರ್‌ಡಿಎ/ಎಲ್ಎಓ/143/2005–06, ದಿನಾಂಕ: 08.11.2005.
3. ದಿನಾಂಕ: 05.12.2017ರಂದು ನಡೆದ ಗ್ರೇಟರ್ ಬೆಂಗಳೂರು ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ 5ನೇ ಸಭೆಯ ವಿಷಯ ಸಂಖ್ಯೆ: 5.5ರ ನಡವಳಿಕೆ.
4. ನಿವೇಶನ ಬಿಡುಗಡೆ ಸಂಬಂಧ ಉತ್ತಮತೆ, ಪರಿಶೀಲನಾ ಮತ್ತು ಮೇಲ್ವಿಚಾರಣಾ ಶುಲ್ಕ ಒಟ್ಟು ರೂ.31,47,500/– ಪಾವತಿಸಿದ ರಸೀದಿ ಸಂಖ್ಯೆ: 108 ದಿನಾಂಕ: 26.07.2019.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕಲ್ಲುಗೋಪನಹಳ್ಳಿ ಗ್ರಾಮದ ಸ.ನಂ. 4, 5, 20/1ಎ, 20/1ಬಿ, 20/1ಸಿ, 20/2ಎ, 20/2ಬಿ, 20/2ಸಿ, 20/3, 20/4, 20/5ಎ, 20/5ಬಿ, 20/6 ಮತ್ತು 20/7 ರಲ್ಲಿ ಒಟ್ಟು 76ಎಕರೆ 10ಗುಂಟೆ ವಿಸ್ತೀರ್ಣದಲ್ಲಿ ವಸತಿ ವಿನ್ಯಾಸ ನಕ್ಷೆಗೆ ಉಲ್ಲೇಖ (1) ರಲ್ಲಿನ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವಸತಿ ವಿನ್ಯಾಸ ಅನುಮೋದನಾ ಪತ್ರ ಸಂಖ್ಯೆ: ಬಿಎಂಆರ್‌ಡಿಎ/ಎಲ್ಎಓ/143/2005–06, ದಿನಾಂಕ: 29.10.2005ರಲ್ಲಿ ಅನುಮೋದನೆ ನೀಡಲಾಗಿದೆ. ಉಲ್ಲೇಖ (2) ರಲ್ಲಿನ ನಿವೇಶನ ಬಿಡುಗಡೆ ಪ್ರಮಾಣ ಪತ್ರದಲ್ಲಿ ಒಟ್ಟು 708 ನಿವೇಶನಗಳ ಪೈಕಿ ಮೊದಲನೇ ಹಂತದ ಶೇ.60ರಷ್ಟು ಅಂದರೆ 424 ನಿವೇಶನಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ.

ಅರ್ಜಿದಾರರು ಸದರಿ ವಸತಿ ಬಡಾವಣೆಯಲ್ಲಿ ಲೋಕೋಪಯೋಗಿ ಇಲಾಖೆಯ ನಿಯಮಾವಳಿಗಳಂತೆ ಡಾಂಬರೀಕರಣ ರಸ್ತೆ, ಮತ್ತು ಮಳೆನೀರಿನ ಚರಂಡಿಗಳನ್ನು ನಿರ್ಮಿಸಿರುವ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ರಾಮನಗರ ಉಪ ವಿಭಾಗ ರವರ ದೃಢೀಕರಣ ಪತ್ರ, ರಸ್ತೆ, ರಸ್ತೆಬದಿ ಚರಂಡಿ, ಪೈಪ್‌ಲೈನ್, ಓವರ್‌ಹೆಡ್ ಟ್ಯಾಂಕ್, ಯುಜಿಡಿ ಹಾಗೂ ಪಾರ್ಕ್ ಮುಂತಾದ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಬಿಡದಿ ಪುರಸಭೆ ಯಿಂದ ದಿನಾಂಕ: 22.02.2017ರ ನಿರಾಕ್ಷೇಪಣಾ ಪತ್ರ, ವಿದ್ಯುದೀಕರಣ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ವಿದ್ಯುತ್ ಸರಬರಾಜು ಮಂಡಳಿ, ಬಿಡದಿ ಉಪ ವಿಭಾಗ, ಬೆಸ್ಕಾಂ ರವರ ದಿನಾಂಕ: 07.10.2016ರ ದೃಢೀಕರಣ ಪತ್ರ ಹಾಗೂ ಉದ್ಯಾನವನ ಅಭಿವೃದ್ಧಿಪಡಿಸಿರುವ ಬಗ್ಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಮನಗರ ರವರ ದಿನಾಂಕ: 24.06.2017ರ ದೃಢೀಕರಣ ಪತ್ರ ಮತ್ತು ಒಳಚರಂಡಿ ನೀರು ಶುದ್ಧಿಕರಣ ಘಟಕ ಸ್ಥಾಪಿಸಿರುವ ಬಗ್ಗೆ ಪ್ರಾದೇಶಿಕ ಅಧಿಕಾರಿಗಳು, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ರಾಮನಗರ ರವರ ಪತ್ರ ದಿನಾಂಕ: 09.10.2017ರ ದೃಢೀಕರಣ ಪತ್ರಗಳನ್ನು ಸಲ್ಲಿಸಿರುತ್ತಾರೆ.

ಅನುಮೋದಿತ ವಸತಿ ವಿನ್ಯಾಸದಲ್ಲಿನ ಸಾರ್ವಜನಿಕ ಉಪಯೋಗದ ಉದ್ಯಾನವನ, ನಾಗರೀಕ ಸೌಲಭ್ಯ ನಿವೇಶನ ಹಾಗೂ ರಸ್ತೆಗಳ ಜಾಗಗಳನ್ನು ದಿನಾಂಕ: 29.10.2005ರಂದು ನೋಂದಣಿಯಾಗಿರುವ ಪರಿತ್ಯಾಜನಾ ಪತ್ರದ ಮೂಲಕ ಮುಫತ್ತಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿರುತ್ತದೆ. ದಿನಾಂಕ: 05.12.2017ರಂದು ನಡೆದ

..2..

Scanned by CamScanner

ಗ್ರೇಟರ್ ಬೆಂಗಳೂರು ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ 5ನೇ ಸಭೆಯ ವಿಷಯ ಸಂಖ್ಯೆ: 5.5ರ ನಡವಳಿಕೆಯಲ್ಲಿ "ಪ್ರಸ್ತಾಪಿತ ವಸತಿ ವಿನ್ಯಾಸ ನಕ್ಷೆಯಲ್ಲಿನ ಅಂತಿಮ ಹಂತದ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆ ಕುರಿತು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 12458–472/2017 ಶ್ರೀ ವೈ.ಬಿ. ಶಿವಾರೆಡ್ಡಿ ಮತ್ತು ಇತರರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ದಾವೆಯ ದಿನಾಂಕ: 04/07/2017ರ ತೀರ್ಪಿನ ಹಿನ್ನೆಲೆಯಲ್ಲಿ, ಯೋಜನಾ ಪ್ರಾಧಿಕಾರಗಳಿಂದ ವಸತಿ ಬಡಾವಣೆ ನಕ್ಷೆ ಅನುಮೋದನೆಯಾಗಿ 5 ವರ್ಷಗಳು ಪೂರ್ಣಗೊಂಡು ಬಡಾವಣೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿರುವಂತಹ ಪ್ರಕರಣಗಳಲ್ಲಿ ಉಳಿಕೆ ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆ ಮಾಡುವ ಕುರಿತು ಅನುಸರಿಸಬೇಕಾದ ಕ್ರಮದ ಬಗ್ಗೆ ಸರ್ಕಾರದ ವತಿಯಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯದೆ 1961ರ ಕಲಂ 76 (ಕೆ)ರ ಅಡಿಯಲ್ಲಿ ಸೂಕ್ತ ಅಧಿಸೂಚನೆ ಹೊರಡಿಸಿದ ನಂತರ ಅಧಿಸೂಚನೆಯನುಸಾರ ಕ್ರಮ ಜರುಗಿಸಿ, ನಂತರ ನಿಯಮಾನುಸಾರ ಅಂತಿಮ ಹಂತದ ಶೇ. 40ರಷ್ಟು ವಸತಿ ನಿವೇಶನಗಳನ್ನು ಬಿಡುಗಡೆ ಮಾಡಲು ದಿನಾಂಕ: 14/07/2017 & 17/08/2017ರ ಪತ್ರಗಳಲ್ಲಿ ಕೋರಲಾಗಿರುತ್ತದೆ. ಈ ಕುರಿತು ಸರ್ಕಾರದ ವತಿಯಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯದೆ 1961ರ ಕಲಂ 76 (ಕೆ)ರ ಅಡಿಯಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಅಧಿಸೂಚನೆಯ ಅನುಸಾರ ಕ್ರಮ ಜರುಗಿಸಿ, ನಂತರ ನಿಯಮಾನುಸಾರ ಅಂತಿಮ ಹಂತದ ಶೇ. 40ರಷ್ಟು ವಸತಿ ನಿವೇಶನಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಯಿತು." ಅದರಂತೆ ನಿಗಧಿತ ಶುಲ್ಕವನ್ನು ಉಲ್ಲೇಖ (4)ರಲ್ಲಿ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 112 ಬೆಂರೂಪ್ರಾ 2005 ದಿನಾಂಕ: 26.05.2005 ಮತ್ತು ದಿನಾಂಕ: 05.12.2017ರ ಯೋಜನಾ ಪ್ರಾಧಿಕಾರದ ನಡವಳಿಕೆ ಸಂಖ್ಯೆ: 5.5ರ ರೀತ್ಯ ಹಾಗೂ ಈ ಪ್ರಾಧಿಕಾರದಿಂದ ತಿಳಿಸಲಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ಸಲ್ಲಿಸಲಾದ ದೃಢೀಕರಣ ಪತ್ರಗಳನ್ವಯ, ಅನುಮೋದಿತ ವಸತಿ ವಿನ್ಯಾಸದಲ್ಲಿ ಈ ಕೆಳಕಂಡ ಉಳಿಕೆ ಅಂತಿಮ ಹಂತದ ಶೇ. 40ರಷ್ಟು ಅಂದರೆ 284 ವಸತಿ ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ.

| ಕ್ರಮ ಸಂಖ್ಯೆ | ಅಳತೆ | ನಿವೇಶನಗಳ ಸಂಖ್ಯೆ | ಒಟ್ಟು |
|---|---|---|---|
| 1 | 50 x 80 | 25, 26, 37, 38, 39, 40, 41, 42, 43, 44, 45, 46, 47, 48, 49, 50, 51, 52, 53,54, 82, 83, 89, 90, 91, 92, 95, 96, 97, 98, 99, 100, 101, 102, 115, 116, 117 and 118. | 38 |
| 2 | 50 x 60 | 379, 388, 569, 585, 586, 702 and 703 | 07 |
| 3 | 40 X 60 | 141, 142, 143, 144, 145, 146, 151, 152, 153, 154, 155, 156, 165, 166, 167, 168, 169, 170, 171, 380, 381, 382, 383, 384, 385, 386, 387, 390, 391, 392, 393, 394, 395, 396, 397, 398, 399, 400, 401, 408, 409, 410, 411, 450, 451, 452, 453, 454, 455, 460, 461, 462, 463, 464, 465, 466, 467, 468, 469, 474, 475, 476, 477, 478, 479, 480, 481, 570, 571, 583, 584, 587, 588, 589, 688, 689, 690, 691, 692, 693, 694, 695, 696, 697, 698, 699, 700, 701, 704, 705, 706, 707 and 708. | 93 |
| 4 | 40 X 47.6 | 347, 348, 349, 356, 357, 358, 359, 360, 361, 362, 363, 364, 365, 366, 367, 372, 373, 374, 375, 376 and 377. | 21 |
| 5 | 35 X 50 | 173, 174, 175, 176, 177, 178, 179, 181, 182, 183, 184, 185, 186, 187, 188, 189, 190, 191, 192, 193, 194, 195, 197, 198, 199, 200, 201, 202, 203, 204, 206, 207, 208, 209, 210, 211, 212, 215, 216, 217, 218, 219, 220, 221, 223, 224, 225, 226, 227, 228, 229, 230, 232, 233, 234, 235, 236, 237, 238, 239, 240, 241, 242, 243, 244, 245, 246, 247, 250, 251, 252, 253, 254, 289, 290, 291, 292, 293, 294, 295, 483, 484, 485, 486, 510, 511, 512, 513, 514, 515, 516 and 517. | 92 |

Scanned by CamScanner

| | | | |
|---|---|---|---|
| 6 | 30 X 50 | 231. | 01 |
| 7 | 30 X 40 | 488, 489, 490, 491, 492, 493, 494, 495 and 496. | 09 |
| 8 | Odd Sites | 23, 68, 134, 147, 148, 164, 172, 180, 205, 213, 214, 222, 248, 249, 346, 355, 368, 369, 389, 402, 412, 413 and 482. | 23 |
| ಒಟ್ಟು | | | 284 |

Thippeswamy K
1/8/2019

**ಸದಸ್ಯ ಕಾರ್ಯದರ್ಶಿಗಳು**
ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್
ಸಿಟಿ ಯೋಜನಾ ಪ್ರಾಧಿಕಾರ ಹಾಗೂ ಮಹಾನಗರ
ಯೋಜಕರು ಬೆಂ.ಮ.ಪ್ರ.ಪ್ರಾ,
ಬೆಂಗಳೂರು.

**ಪ್ರತಿಯನ್ನು:-**

1) ಮೆ॥ ಎ.ಬಿ.ಎಂ ಬಿಲ್ಡ್‌ಟೆಕ್ ಪ್ರೈ.ಲಿ., ನಂ. 12/ಎ–2, ಎ.ಬಿ.ಎಂ ಟವರ್, 2ನೇ ಫ್ಲೋರ್, 14ನೇ ಕ್ರಾಸ್, 24ನೇ ಮೈನ್, 1ನೇ ಪೇಸ್, ಜೆ.ಪಿ. ನಗರ, ಬೆಂಗಳೂರು– 560078 ಇವರಿಗೆ ಮಾಹಿತಿಗಾಗಿ.
2) ಮುಖ್ಯಾಧಿಕಾರಿಗಳು, ಬಿಡದಿ ಪುರಸಭೆ, ಬಿಡದಿ ಇವರಿಗೆ ಈ ಪತ್ರವನ್ನು ಕಳುಹಿಸುತ್ತಾ, ಯೋಜನಾ ಪ್ರಾಧಿಕಾರದಿಂದ ಬಿಡುಗಡೆ ಮಾಡಿರುವ ನಿವೇಶನಗಳಿಗೆ ಮಾತ್ರ ಖಾತಾ ಮಾಡುವಂತೆ ಸೂಚಿಸಲಾಗಿದೆ.
3) ಉಪನೋಂದಣಾಧಿಕಾರಿಗಳು, ರಾಮನಗರ ಉಪವಿಭಾಗ, ರಾಮನಗರ ಇವರಿಗೆ ಈ ಪತ್ರವನ್ನು ಕಳುಹಿಸುತ್ತಾ ಪ್ರಾಧಿಕಾರದಿಂದ ಬಿಡುಗಡೆ ಮಾಡಿರುವ ನಿವೇಶನಗಳನ್ನು ಮಾತ್ರ ಖಾತಾ ಮಾಡುವಂತೆ ಸೂಚಿಸಲಾಗಿದೆ.
4) ಕಛೇರಿ ಪ್ರತಿ.

Scanned by CamScanner